> ನಾನು ಗಂಡಸರ ಬಗ್ಗೆ ತಿಳಿದುಕೊಂಡಿದ್ದು ಗಂಡಸರಿಂದಲೇ. ಗಂಡಸರ ಮನಸ್ಸು ಹೆಂಗಸರ ಮನಸ್ಸು ಅಂತ ತಾನೇ ವಿಮರ್ಶಕರು ಹೇಳುವುದು. ನಾನು ತಿಳಿವಳಿಕೆಯೊಂದಿಗೆ ಮಾತಾಡಿದರೆ ಅವರು ನನ್ನದು ಗಂಡು ಮನಸ್ಸು ಅನ್ನುತ್ತಾರೆ. ಅಸಂಬದ್ಧವಾಗಿ, ಅಪ್ರಸ್ತುತವಾಗಿ ಮಾತಾಡಿದರೆ ಟಿಪಿಕಲ್ ಹೆಣ್ಣು ಮನಸ್ಸು ಎನ್ನುತ್ತಾರೆ!

◆ **ನೀವು ಬೆಳಗಿನ ಹೊತ್ತು ಹೆಚ್ಚು ಸ್ಫೂರ್ತಿಯಿಂದ ಕೆಲಸ ಮಾಡುವಿರಾ?**

ಯಾವಾಗ ಸಮಯ ಸಿಗುವುದೋ ಆಗೆಲ್ಲ ಮಾಡುತ್ತೇನೆ. ಕೆಲಸಕ್ಕೆ ಹೋಗುತ್ತಿದ್ದಾಗ ಇಲ್ಲವೇ ಮನೆಕೆಲಸದಲ್ಲಿದ್ದಾಗ ಅಥವ ಬೇರೆ ಕೆಲಸದಲ್ಲಿದ್ದಾಗ ರಾತ್ರಿಯ ಹೊತ್ತು ಬರೆಯುತ್ತಿದ್ದೆ. ಆದರೆ, ಮುಂಜಾವಿನ ಪರಿಪೂರ್ಣ ನಿಶ್ಯಬ್ದದಲ್ಲಿ ಕೂತು ಬರೆಯುವುದನ್ನು ಹೆಚ್ಚು ಇಷ್ಟಪಡುತ್ತೇನೆ. ಇನ್ನು ಸಾಧ್ಯವಿಲ್ಲ ಅಂತ ಕೈಸೋಲುವವರೆಗೂ ಬರೆಯುತ್ತೇನೆ. ಅದು ಹೇಗಿರುತ್ತದೆ ಎಂದರೆ, ಬಾವಿಯಲ್ಲಿ ನೀರು ಖಾಲಿಯಾಗಿ ಬಿಡುತ್ತದೆ. ಅದು ಮತ್ತೆ ತುಂಬಿಕೊಳ್ಳಲು ನೀವು ನಾಳೆಯವರೆಗೆ ಕಾಯಲೇಬೇಕು.

◆ **ಮುಖ್ಯವಾಗಿ ನೀವು ಬರೆಯುವಾಗ ಮಧ್ಯದಲ್ಲಿ ಬಿಡುವು ತೆಗೆದುಕೊಳ್ಳುವುದಿಲ್ಲವೆ? ಯಾವುದೇ ರೀತಿಯಲ್ಲಿ ಏಕಾಗ್ರತೆಗೆ ಅಡ್ಡಿಯಾಗುವುದನ್ನು ತಪ್ಪಿಸಿಕೊಳ್ಳುವಿರಿ, ಅಲ್ಲವೇ?**

ಬರೆಯುವ ತುಡಿತ ತೀವ್ರವಾಗಿದ್ದಾಗ ಮುಂಜಾನೆ ಬೇಗ ಎದ್ದಾಗಲೂ ಮನಸ್ಸು ಹಿಂದಿನ ದಿನ ಎಲ್ಲಿಗೆ ನಿಲ್ಲಿಸಿದ್ದೆನೋ ಅದನ್ನೇ ಕುರಿತು ಯೋಚಿಸುತ್ತಿರುತ್ತದೆ. ಹಿಂದಿನ ದಿನ ಅರ್ಧದಲ್ಲೇ ನಿಲ್ಲಿಸಿದ ಪ್ಯಾರಾವನ್ನು ಮರುದಿನ ಪೂರ್ತಿಮಾಡುತ್ತೇನೆ. 'Ship of Fools' ಬರೆಯಲು ಶುರುಮಾಡಿದ್ದು ಇಪ್ಪತ್ತು ವರ್ಷಗಳ ಹಿಂದೆ. ಎಷ್ಟೋ ವರ್ಷಗಳು ಮತ್ತೆ ಅದನ್ನು ಮುಟ್ಟಲಿಲ್ಲ. ಆದರೆ, ಅಂದು ಯಾವ ಪ್ಯಾರವನ್ನು ಅರ್ಧಕ್ಕೆ ನಿಲ್ಲಿಸಿದ್ದೆ ಎಂಬುದನ್ನು ಹೇಳಬಲ್ಲೆ. ಬಹುಶಃ ಇದು ಬೇರೆ ಯಾರಿಗೂ ಸಾಧ್ಯವಿಲ್ಲ.

◆ **ಇಷ್ಟು ವರ್ಷಗಳಲ್ಲಿ ನಿಮ್ಮ ಶೈಲಿ ಅಥವ ಮನೋಭಾವದಲ್ಲಾಗಲಿ ಬದಲಾವಣೆ ಆಗಿಲ್ಲವೆ?**

ನನ್ನ ದೃಷ್ಟಿಕೋನ ಅಥವ ಭಾವಿಸುವುದರಲ್ಲಿ ಸ್ವಲ್ಪಮಟ್ಟಿಗಷ್ಟೇ ಬದಲಾವಣೆಯಾಗಿರುವುದನ್ನು ನೋಡಿ ಅಚ್ಚರಿಯಾಗುತ್ತದೆ. ಒಂದಲ್ಲ ಒಂದು ಕಾರಣದಿಂದ ಮುಗಿಸದೆ ಬಿಟ್ಟಿದ್ದ ನನ್ನ ಕೆಲವು ಹಳೆಯ ಸಣ್ಣಕತೆಗಳನ್ನು ಮುಗಿಸಬೇಕೆಂದುಕೊಂಡಿದ್ದೇನೆ. ಅವುಗಳಲ್ಲಿ ಒಂದನ್ನು ಮುಗಿಸಬಹುದು ಅನ್ನಿಸಿತು. ಅದರ ಮೂರು ಆವೃತ್ತಿಗಳಿವೆ. 1923ರಲ್ಲಿ ಅದನ್ನು ಬರೆಯಲು ಶುರುಮಾಡಿದೆ. ನನಗಾಗ ಇಪ್ಪತ್ತು ವರ್ಷ. ನನ್ನ ಜೀವನದಲ್ಲಿ ನಡೆದ ಘಟನೆಯನ್ನು ಆಧರಿಸಿದ ಕತೆ. ನನಗೀಗ ಎಪ್ಪತ್ತು ವರ್ಷ. ಈಗಲೂ ಹಾಗೇ ಇದೀನಲ್ಲ ಅಂತ ಅಚ್ಚರಿಯಾಗುತ್ತದೆ. ಕೆಲವು ವಿಷಯಗಳನ್ನು ಇನ್ನಷ್ಟು ಸರಳವಾಗಿ, ಸ್ಪಷ್ಟವಾಗಿ, ನೇರವಾಗಿ ಹೇಳಬಹುದು. ಆದರೆ, ನನ್ನ ದೃಷ್ಟಿಕೋನ ಬದಲಾಗಿಲ್ಲ.